# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1] | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 835 |
| 2] | ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3] | ಉತ್ತರಿಸುವ ದಿನಾಂಕ | : | 21/03/2025 |
| 4] | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಹೆಚ್ಚುತ್ತಿರುವ ಸಂಕೀರ್ಣ ಅಪರಾಧ ಚಟುವಟಿಕೆಗಳು, ಸುರಕ್ಷತೆ ಮತ್ತು ಕಾನೂನು ಸುವ್ಯವಸ್ಥೆ ಒದಗಿಸಲು ಅಗತ್ಯವಿರುವ ಸರ್ಕಾರ ನಿಗದಿಪಡಿಸಿದ ಜನಸಂಖ್ಯೆ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ (Population police ratio) ದಾಮಾಶಯ ಎಷ್ಟು; ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; | ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಬ್ಯೂರೋ ಆಫ್ ಪೊಲೀಸ್ ರಿಸರ್ಚ್ & ಡೆವೆಲಪ್‌ಮೆಂಟ್ (ಬಿಪಿಆರ್&ಡಿ)ರ ವತಿಯಿಂದ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಭಾರತದ ಪೊಲೀಸ್ ಸಂಘಟನೆಗಳ ಕುರಿತು ಮಾಹಿತಿಯನ್ನು ಪ್ರಕಟಿಸಲಾಗುತ್ತಿದ್ದು, ಇದರನ್ವಯ 2023ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಸುಮಾರು 165.04 ಸಂಖ್ಯೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಅಖಿಲ ಭಾರತ ಮಟ್ಟದಲ್ಲಿ ಈ ಅನುಪಾತವು ಒಂದು ಲಕ್ಷ ಜನಸಂಖ್ಯೆಗೆ 196.88 ಇರುತ್ತದೆ (ಪ್ರತಿ ಲಗತ್ತಿಸಿದೆ).<br><br>ವಿವಿಧ ಹುದ್ದೆಗಳ ಸೃಜನೆಗೆ ಸಂಬಂಧಿಸಿದಂತೆ ಪರಿಶೀಲನೆಯಲ್ಲಿರುವ ಪ್ರಸ್ತಾವನೆಗಳ ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಆ) | ಪ್ರಸ್ತುತ ಪೊಲೀಸ್ ಸಿಬ್ಬಂದಿಗಳಿಗೆ ವಿಶ್ರಾಂತಿ ರಹಿತವಾಗಿ ಮತ್ತು 8:00 ಗಂಟೆಗಳಿಗಿಂತ ಹೆಚ್ಚು ಕಾರ್ಯನಿರ್ವಹಿಸುವ ಸನ್ನಿವೇಶ ಉದ್ಭವಿಸುತ್ತಿದೆಯೇ; ಇಲಾಖೆಯಲ್ಲಿ ಡ್ಯೂಟಿ ರೊಟೇಷನ್ ಮಾಡಲಾಗುತ್ತಿದೆಯೇ; (ಡ್ಯೂಟಿ ಪಾಯಿಂಟ್‌ಗಳು, ಸಿಬ್ಬಂದಿಗಳ ಸಂಖ್ಯೆ ಮತ್ತು ಡಬಲ್ ಡ್ಯೂಟಿ ಮಾಡುವ ಸಿಬ್ಬಂದಿಗಳ ಅಂಕಿ ಅಂಶ ಸಹಿತ ವಿವರ ನೀಡುವುದು) | ಪ್ರಸ್ತುತ ಇಲಾಖೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಕರ್ತವ್ಯಕ್ಕೆ ಸರದಿ (Rotation) ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ರಾಜ್ಯದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ಮತ್ತು ಕಾನೂನು ಸುವ್ಯವಸ್ಥೆ ಸಂಬಂಧಿತ ಘಟನೆಗಳು ತಲೆದೋರಿದ ಸಂದರ್ಭಗಳ ಅನುಸಾರ ಡ್ಯೂಟಿ ಪಾಯಿಂಟ್‌ಗಳು ಮತ್ತು ನಿಯೋಜಿಸಲಾಗುವ ಸಿಬ್ಬಂದಿಗಳ ಸಂಖ್ಯೆಯು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಆದರೆ ಯಾವುದೇ ಸಿಬ್ಬಂದಿಗಳಿಗೆ ಡಬಲ್ ಡ್ಯೂಟಿ ನಿಯೋಜನೆ ಮಾಡುತ್ತಿರುವುದಿಲ್ಲ.<br><br>ಪೊಲೀಸ್ ಸಿಬ್ಬಂದಿಯವರಿಗೆ ವಿವಿಐಪಿ ಭೇಟಿ ಸಂದರ್ಭಗಳಲ್ಲಿ; ಸಾರ್ವತ್ರಿಕ ಚುನಾವಣೆ; ಕೋಮು ಗಲಭೆ; ಕಾನೂನು ಸುವ್ಯವಸ್ಥೆಗೆ ಧಕ್ಕೆಯಾದ ಸಂದರ್ಭದಲ್ಲಿ ಹಾಗೂ ಇನ್ನಿತರ ವಿಶೇಷ ಬಂದೋಬಸ್ತ್ ಕರ್ತವ್ಯಗಳ ಸಮಯದಲ್ಲಿ 8:00 |

| | | |
|---|---|---|
| | | ಗಂಟೆಗಳಿಗಿಂತಲೂ ಅಧಿಕಾವಧಿಗೆ ಸಿಬ್ಬಂದಿಗಳಿಗೆ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಸಂಚಾರಿ ಪೊಲೀಸ್ ಅಧಿಕಾರಿಗಳಿಗೆ ಖಾಸಗಿ ವಾಹನಗಳನ್ನು ತಪಾಸಣೆ ಮಾಡುವ ಬಗ್ಗೆ body camera ಧರಿಸುವ ಸಹಿತ ಮಾರ್ಗಸೂಚಿಗಳು ಇವೆಯೇ: ಹೆಚ್ಚಿನ ಸಂದರ್ಭಗಳಲ್ಲಿ ಪೊಲೀಸ್ ಅಧಿಕಾರಿಗಳ ಅಪಾಯಕಾರಿ ಮತ್ತು ಅಗಲ ಕಿರಿದಾದ ಹೆಚ್ಚು ವಾಹನ ಸಂಚಾರವಿರುವ ಸ್ಥಳಗಳಲ್ಲಿ ವಾಹನಗಳನ್ನು ತಪಾಸಣೆ ಮಾಡಿ ಸಂಚಾರಕ್ಕೆ ತೊಂದರೆ ಮಾಡುವ ಬಗ್ಗೆ ಸರ್ಕಾರವು ಏನು ಕ್ರಮವಹಿಸುತ್ತಿದೆ: | ರಾಜ್ಯದಲ್ಲಿ ಸಂಚಾರ ವಿಭಾಗದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳ ಕರ್ತವ್ಯದಲ್ಲಿ ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಪ್ರತಿಯೊಬ್ಬ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಬಾಡಿವೋರ್ನ್ ಕ್ಯಾಮೆರಾಗಳನ್ನು ವಿತರಿಸಲಾಗಿದೆ. ಈ ಉಪಕರಣವು ಸಂಚಾರ ಪೊಲೀಸರ ಮತ್ತು ಸಾರ್ವಜನಿಕರ ನಡುವಿನ ಸಂವಹನವನ್ನು ಪಾರದರ್ಶಕವಾಗಿ ಇಡುವಲ್ಲಿ ಸಹಕಾರಿಯಾಗುತ್ತಿದೆ. ಸಂಚಾರ ಪೊಲೀಸ್ ಸಿಬ್ಬಂದಿಗಳು ಸಾರ್ವಜನಿಕರೊಂದಿಗೆ ಸಂವಹನ ನಡೆಸುವ ಕುರಿತು ನಿಗಾವಹಿಸಲು ಸಹಕರಿಸುವಂತೆ ಡಿ.ಜಿ.ಪಿ. ಕಛೇರಿಯಿಂದ ಎಸ್.ಓ.ಪಿ (ನಿರ್ದಿಷ್ಟ ಕಾರ್ಯವಿಧಾನ)ಯನ್ನು ಹೊರಡಿಸಲಾಗಿದ್ದು, ಪ್ರತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ.<br><br>ರಾಜ್ಯದಲ್ಲಿ ಸುಗಮ ಸಂಚಾರಕ್ಕೆ ಪ್ರಮುಖ ಆದ್ಯತೆಯನ್ನು ನೀಡಲಾಗುತ್ತಿದ್ದು, ಸಂಚಾರ ಪೊಲೀಸರ ಕರ್ತವ್ಯಗಳಲ್ಲಿ ರಸ್ತೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಿಯಮ ಜಾರಿಯು ಪ್ರಮುಖವಾಗಿರುತ್ತದೆ. ಸುಗಮ ಸಂಚಾರವನ್ನು ಗಮನದಲ್ಲಿಟ್ಟುಕೊಂಡು ದಟ್ಟಣೆಯಿಲ್ಲದ ವೇಳೆಯಲ್ಲಿ ಮಾತ್ರ ಸಂಚಾರ ನಿಯಮ ಉಲ್ಲಂಘನಾ ಪ್ರಕರಣಗಳನ್ನು ದಾಖಲಿಸಲು ಕ್ರಮವಹಿಸಲಾಗಿದ್ದು, ಸಂಚಾರ ನಿಯಮ ಉಲ್ಲಂಘನೆ ಎಸಗಿರುವುದು ಸ್ಪಷ್ಟವಾಗಿ ಕಂಡು ಬಂದಲ್ಲಿ ಮಾತ್ರ ವಾಹನ ಚಾಲಕ/ಸವಾರರನ್ನು ತಡೆದು ಕಾನೂನು ಕ್ರಮ ಜರುಗಿಸುವಂತೆ, ಸಂಚಾರ ವಿಭಾಗದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ ವಾಹನಗಳನ್ನು ಭೌತಿಕವಾಗಿ ತಡೆಯದೇ ಸಂಪರ್ಕ ರಹಿತ ನಿಯಮ ಜಾರಿಯಡಿಯಲ್ಲಿ ಪ್ರಕರಣ ದಾಖಲು ಮಾಡುವ ಪ್ರಕ್ರಿಯೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. |
| ಈ) | ನಾಗರೀಕ ಭೂಸಂಬಂಧಿತ ಪ್ರಕರಣಗಳಲ್ಲಿ ಪೊಲೀಸರು ಮಧ್ಯ ಪ್ರವೇಶಿಸಬಾರದೆಂಬ ಸುತ್ತೋಲೆಯಿದ್ದರೂ ಪೊಲೀಸರು ಪರಿಶೀಲನೆ ನೆಪದಲ್ಲಿ ಸ್ಥಳಕ್ಕೆ ಸಂದರ್ಶಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸಿವಿಲ್ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳು ಮಧ್ಯ ಪ್ರವೇಶಿಸಬಾರದೆಂದು ಈಗಾಗಲೇ ಹಲವು ಸುತ್ತೋಲೆಗಳ ಮೂಲಕ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಹಾಗೂ ಸೂಚನೆಗಳನ್ನು ನೀಡಲಾಗಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಪಿಟಿಷನ್ ಸಂಖ್ಯೆ: 7793/2016ರಲ್ಲಿ ಹೊರಡಿಸಲಾಗಿರುವ ಆದೇಶದಂತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯವರು |

| | | |
|---|---|---|
| | | ಸಿವಿಲ್ ಪ್ರಕರಣಗಳಲ್ಲಿ ಮಧ್ಯ ಪ್ರವೇಶಿಸುವುದನ್ನು ಗಂಭೀರವಾಗಿ ಪರಿಗಣಿಸಿ ಅಂತಹ ಪ್ರಕರಣಗಳು ಮರುಕಳಿಸದಂತೆ ಎಲ್ಲಾ ಘಟಕಾಧಿಕಾರಿಗಳ ಮೂಲಕ ಸುತ್ತೋಲೆ ಸಂಖ್ಯೆ: ಕಾನೂನು-1/04/2017-18, ದಿನಾಂಕ: 24.05.2017ರಲ್ಲಿ ಎಚ್ಚರಿಕೆ ನೀಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).<br><br>ಮುಂದುವರೆದಂತೆ, ಸಿವಿಲ್ ಪ್ರಕರಣಗಳಲ್ಲಿ ಮಧ್ಯ ಪ್ರವೇಶಿಸುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಕಠಿಣವಾದ ಶಿಸ್ತು ಕ್ರಮ ಕೈಗೊಳ್ಳುವಂತೆ ಹಾಗೂ ಈ ವಿಷಯದಲ್ಲಿ ನಿರ್ಲಕ್ಷತೆ/ಬೇಜವಾಬ್ದಾರಿ ತೋರಿದ್ದಲ್ಲಿ ಸಂಬಂಧಪಟ್ಟ ಘಟಕಾಧಿಕಾರಿಗಳ ವಿರುದ್ಧವೂ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಲಾಗಿರುತ್ತದೆ. |
| ಉ) | ಪೊಲೀಸ್ ಇಲಾಖೆಯಿಂದ ಸಂಚಾರ ನಿಯಮಗಳನ್ನು ಉಲ್ಲಂಘಿಸದ ಮತ್ತು ನೋಟೀಸಿನಲ್ಲಿ ಉಲ್ಲೇಖಿಸಿದ ಸ್ಥಳಗಳಿಗೆ ಹೋಗಿಯೇ ಇಲ್ಲದ ವಾಹನಗಳ ಮಾಲೀಕರಿಗೆ ದಂಡನಾ ನೋಟೀಸು ಜಾರಿಯಾಗಲು ಕಾರಣವೇನು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಿಯಮ ಉಲ್ಲಂಘಿಸಿದ ವಾಹನ ತಮ್ಮದಲ್ಲ ಎಂದು ಆಕ್ಷೇಪಣೆ ದಾಖಲಿಸಿ ನೋಟೀಸು ರದ್ದಾದ ಪ್ರಕರಣಗಳೆಷ್ಟು? (ಕಳೆದ 03 ವರ್ಷಗಳ ವಿವರ ನೀಡುವುದು). | ಸಂಚಾರ ನಿಯಮ ಉಲ್ಲಂಘನೆಗಳನ್ನು ಸಂಪರ್ಕ ರಹಿತ ಸಂಚಾರ ನಿಯಮ ಜಾರಿಯಡಿಯಲ್ಲಿ ದಾಖಲು ಮಾಡುವ ವ್ಯವಸ್ಥೆಯನ್ನು ಹೊಂದಿರುವ ಘಟಕಗಳಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಛಾಯಾ ಚಿತ್ರಗಳನ್ನು ಸೆರೆಹಿಡಿದು ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಆದರೆ, ವಾಹನಗಳ ನೋಂದಣಿ ಫಲಕಗಳನ್ನು ಬದಲಾಯಿಸಿಕೊಂಡು ಸಂಚಾರ ನಿಯಮ ಉಲ್ಲಂಘನೆ ಮಾಡಿರುವ ಮತ್ತು ಕ್ಯಾಮೆರಾಗಳು ಸೆರೆ ಹಿಡಿದಿರುವ ನೋಂದಣಿ ಫಲಕಗಳು ದೋಷಪೂರಿತವಾಗಿರುವ ಸಂದರ್ಭಗಳಲ್ಲಿ ವಾಹನಗಳ ಮಾಲೀಕರಿಗೆ ದಂಡನಾ ನೋಟೀಸ್ ಜಾರಿಯಾಗಿದ್ದಲ್ಲಿ, ಮಾಲೀಕರು ಈ ಬಗ್ಗೆ ದೂರು ನೀಡಿದಾಗ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಂಪರ್ಕ ರಹಿತ ಸಂಚಾರ ನಿಯಮ ಜಾರಿಯಲ್ಲಿಲ್ಲದ ಕಾರಣ ಸಂಚಾರ ನಿಯಮ ಉಲ್ಲಂಘಿಸಿದ ವಾಹನ ತಮ್ಮದಲ್ಲ ಎಂದು ಆಕ್ಷೇಪಣೆ ದಾಖಲಿಸಿ ನೋಟೀಸು ರದ್ದಾದ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 40 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
**ಗೃಹ ಸಚಿವರು.**

# पुलिस संगठनों के आंकड़े

(01 जनवरी, 2023 तक)

# DATA ON POLICE ORGANIZATIONS


(AS ON JANUARY 01, 2023)

पुलिस अनुसंधान एवं विकास ब्यूरो

गृह मंत्रालय, भारत सरकार

BUREAU OF POLICE RESEARCH AND DEVELOPMENT

Ministry of Home Affairs, Govt. of India



## TABLE 2.1.3 -- SANCTIONED AND ACTUAL POLICE - POPULATION AND AREA RATIO IN STATES/UTs AS ON 01.01.2023

| Sl. No. | STATES/UTs | CIVIL POLICE PER LAKH OF POPULATION | | DISTRICT ARMED RESERVE POLICE PER LAKH OF POPULATION | | ARMED POLICE PER LAKH OF POPULATION | | IRB POLICE PER LAKH OF POPULATION | | TOTAL POLICE PER LAKH OF POPULATION | |
|---|---|---|---|---|---|---|---|---|---|---|---|
| | | S | A | S | A | S | A | S | A | S | A |
| (1) | (2) | (3) | (4) | (5) | (6) | (7) | (8) | (9) | (10) | (11) | (12) |
| 1 | Andhra Pradesh | 144.37 | 125.31 | 31.55 | 24.68 | 18.12 | 11.78 | 6.36 | 4.12 | 200.40 | 165.89 |
| 2 | Arunachal Pradesh | 540.51 | 374.41 | - | - | 120.39 | 98.71 | 322.89 | 293.63 | 983.79 | 766.75 |
| 3 | Assam | 65.16 | 57.73 | 34.06 | 29.13 | 107.99 | 97.72 | 22.65 | 21.16 | 229.86 | 205.74 |
| 4 | Bihar | 54.03 | 31.21 | 40.63 | 34.87 | 16,49 | 12.32 | 3.42 | 3.08 | 114.57 | 81.49 |
| 5 | Chhattisgarh | 174.55 | 132.18 | - | - | 47.43 | 41.80 | 44.80 | 40.76 | 266.79 | 214.74 |
| 6 | Goa | 459.39 | 356.72 | - | - | 36.16 | 11.71 | 192.30 | 130.04 | 687.84 | 498.47 |
| 7 | Gujarat | 93.53 | 64.61 | 43.16 | 33.58 | 36.81 | 25.66 | - | - | 173.50 | 123.84 |
| 8 | Haryana | 257.12 | 177.07 | - | - | 22.04 | 13.31 | 12.99 | 8.70 | 292.15 | 199.08 |
| 9 | Himachal Pradesh | 162.50 | 155.32 | 10.34 | 10.34 | 10.39 | 9.07 | 74.48 | 65.66 | 257.71 | 240.40 |
| 10 | Jharkhand | 154.15 | 110.75 | - | - | 31.98 | 28.59 | 24.91 | 18.38 | 211.04 | 157.71 |
| 11 | Karnataka | 104.18 | 104.28 | 33.86 | 27.16 | 19.59 | 14.44 | 7.41 | 5.07 | 165.04 | 150.95 |
| 12 | Kerala | 141.58 | 129.25 | - | - | 27.83 | 18.40 | 3.32 | 3.04 | 172.73 | 150.68 |
| 13 | Madhya Pradesh | 111.59 | 94.94 | - | - | 31.49 | 24.28 | 2.46 | 1.91 | 145.54 | 121.13 |
| 14 | Maharashtra | 155.36 | 109.99 | 14.51 | 13.92 | 12.85 | 10.81 | 2.21 | 2.11 | 184.92 | 136.83 |
| 15 | Manipur | 556.40 | 473.61 | - | - | 211.34 | 192.89 | 326.05 | 275.13 | 1,093.80 | 941.63 |
| 16 | Meghalaya | 192.59 | 159.23 | 103.33 | 94.03 | 93.76 | 74.92 | 115.57 | 94.75 | 505.25 | 422.92 |
| 17 | Mizoram | 370.72 | 251.01 | - | - | 204.70 | 145.42 | 341.20 | 198.78 | 916.63 | 595.21 |
| 18 | Nagaland | 251.73 | 228.74 | 118.04 | 130.68 | 569.05 | 534.28 | 262.66 | 242.24 | 1,201.48 | 1,135.94 |
| 19 | Odisha | 75.88 | 55.82 | 23.59 | 21.42 | 34.04 | 28.08 | 17.48 | 15.26 | 150.99 | 120.58 |
| 20 | Punjab | 233.26 | 198.91 | - | - | 24.54 | 23.51 | 20.58 | 18.60 | 278.39 | 241.02 |
| 21 | Rajasthan | 117.40 | 97.46 | - | - | 16.92 | 15.05 | 6.30 | 5.67 | 140.61 | 118.18 |
| 22 | Sikkim | 404.96 | 416.03 | - | - | 150.29 | 121.43 | 444.31 | 296.94 | 999.56 | 834.40 |
| 23 | Tamil Nadu | 109.20 | 100.56 | 43.11 | 40.55 | 20.10 | 18.27 | 0.15 | 0.15 | 172.56 | 159.54 |
| 24 | Telangana | 128.60 | 93.81 | 63.27 | 44.54 | 14.99 | 10.21 | 19.61 | 14.12 | 226.47 | 162.66 |
| 25 | Tripura | 199.59 | 146.68 | 112.35 | 68.34 | 94.28 | 85.03 | 312.81 | 255.52 | 719.04 | 555.57 |
| 26 | Uttar Pradesh | 139.73 | 104.69 | 23.72 | 8.33 | 18.39 | 21.85 | 0.41 | 0.52 | 182.24 | 135.39 |
| 27 | Uttarakhand | 95.14 | 99.17 | 51.22 | 38.56 | 31.62 | 32.79 | 15.47 | 13.45 | 193.45 | 183.96 |
| 28 | West Bengal | 100.33 | 61.09 | 28.83 | 17.39 | 34.78 | 21.96 | 2.98 | 0.69 | 166.93 | 101.13 |
| 29 | A & N Islands | 830.85 | 718.91 | 181.84 | 103.23 | - | - | 250.50 | 228.11 | 1,263.18 | 1,050.25 |
| 30 | Chandigarh | 395.92 | 328.55 | - | - | 93.96 | 93.96 | 82.14 | 59.14 | 572.02 | 481.65 |
| 31 | Dadra and Nagar Haveli and Daman and Diu | 73.04 | 54.00 | - | - | - | - | 41.01 | 39.62 | 114.05 | 93.63 |
| 32 | Delhi | 395.76 | 335.97 | - | - | 48.94 | 44.23 | - | - | 444.70 | 380.20 |
| 33 | Jammu and Kashmir | 389.39 | 339.09 | 25.65 | 18.40 | 112.20 | 83.39 | 170.90 | 157.63 | 698.13 | 598.52 |
| 34 | Ladakh | 789.00 | 656.33 | - | - | - | - | 321.00 | 217.33 | 1,110.00 | 873.67 |
| 35 | Lakshadweep | 465.22 | 365.22 | - | - | - | - | - | - | 465.22 | 365.22 |
| 36 | Puducherry | 160.98 | 114.23 | - | - | 50.98 | 29.45 | 61.78 | 55.46 | 273.74 | 199.14 |
| | **All India** | 132.60 | 103.47 | 23.55 | 17.27 | 28.56 | 24.00 | 12.17 | 10.10 | 196.88 | 154.84 |

S: Sanctioned

A: Actual

(NA) denotes "Not Available", (NP) denotes "Not Provided"

(-) denotes "Zero"

## ಅನುಬಂಧ-1

| ಕ್ರ.ಸಂ. | ಪತ್ರ ಮತ್ತು ದಿನಾಂಕ | ವಿಷಯ | ಮಂಜೂರಾತಿ ಕೋರಲಾದ ಹುದ್ದೆಗಳು |
|---|---|---|---|
| 1. | ಆರ್‌ಎಲ್‌ಎನ್(5)41/2017-18, ದಿನಾಂಕ: 05.05.2023. | ಶ್ರೀರಂಗಪಟ್ಟಣದಲ್ಲಿ ಸಂಚಾರ ಪೊಲೀಸ್ ಠಾಣೆಗೆ ಸಿಬ್ಬಂದಿ ಬಲ ಸೃಜಿಸುವ ಬಗ್ಗೆ. | ಪಿ.ಎಸ್‌ಐ-02,ಎಎಸ್‌ಐ-04, ಹೆಚ್.ಸಿ-12,ಪಿ.ಸಿ-24 ಎಪಿಸಿ-01 |
| 2. | ಪಿ&ಸಿ(2)09/2024-25, ದಿನಾಂಕ: 18.01.2025. | ಸಿಐಡಿ ಘಟಕದ ಸಿ.ಹೆಚ್.ಸಿ ಮತ್ತು ಎ.ಎಸ್‌ಐ ಹುದ್ದೆಗಳ ಮಂಜೂರಾತಿ ಬಲವನ್ನು ಹೆಚ್ಚಿಸುವ ಕುರಿತು. | ಎ.ಎಸ್‌ಐ-60, ಸಿಹೆಚ್.ಸಿ-60, |
| 3. | ಪಿ&ಸಿ(2)05/2023-24, ದಿನಾಂಕ: 26.11.2024. | ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ 04 ಬಿ.ಡಿ.ಡಿ.ಎಸ್ (Bomb Detection And Disposal squad) ತಂಡಗಳನ್ನು ಸೃಜಿಸುವ ಬಗ್ಗೆ. | ಪಿ.ಎಸ್‌ಐ-04 ಹೆಚ್.ಸಿ -08, ಪಿಸಿ-24, ಎಪಿಸಿ(ಚಾಲಕರು)-04. |
| 4. | ಪಿ&ಸಿ(2)31/2024-25, ದಿನಾಂಕ: 05.12.2024. | ಕರ್ನಾಟಕ ರಾಜ್ಯದಲ್ಲಿ ಸೈಬರ್ ಅಪರಾಧ ತಡೆ ಘಟಕ (Cyber Crimes Prevention Unit) ಅನ್ನು ಸ್ಥಾಪಿಸುವ ಕುರಿತು. | ಎಸ್.ಪಿ -04, ಡಿವೈಎಸ್.ಪಿ-02 ಪಿಐ-02, ಸಿಹೆಚ್.ಸಿ/ಸಿಪಿಸಿ-22, ಎಹೆಚ್.ಸಿ/ಎಪಿಸಿ-24, ಎ.ಎ.ಓ-01, ಎಸ್‌ಎಸ್.-05, ಶೀಘ್ರಲಿಪಿಗಾರರು-07, ಪ್ರ.ದ.ಸ.-09, ದ್ವಿ.ದ.ಸ.-09, ದಲಾಯತ್ -08 ಡಿಜಿಟಲ್ ಫೋರೆನ್ಸಿಕ್ ಅನಾಲಿಸ್ಟ್-100 |
| 5. | ಪಿ&ಸಿ(2)01/2024-25, ದಿನಾಂಕ: 29.01.2024. | ಪ್ರಾಂಶುಪಾಲರು, ಪೊಲೀಸ್ ತರಬೇತಿ ಶಾಲೆ, ಮೈಸೂರು ಘಟಕಕ್ಕೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳನ್ನು ಹೆಚ್ಚಿಸುವ ಕುರಿತು. | ಪಿಐ(ಸಿವಿಲ್)-02, ಎ.ಹೆಚ್.ಸಿ- 05, ಎಪಿಸಿ-05 |
| 6. | ಪಿ&ಸಿ(2)53/2024-25, ದಿನಾಂಕ: 29.01.2025. | ಮಾನ್ಯ ಮುಖ್ಯಮಂತ್ರಿಗಳ ಭದ್ರತಾ ವಿಭಾಗಕ್ಕೆ ಹೆಚ್ಚುವರಿಯಾಗಿ 01 ಉಪ ನಿರ್ದೇಶಕರ ಹುದ್ದೆಯನ್ನು ಸೃಜಿಸುವ ಕುರಿತು. | ಉಪ ನಿರ್ದೇಶಕರು-01 |
| 7. | ಪಿ&ಸಿ(2)05/2024-25, ದಿನಾಂಕ: 05.12.2024. | ಕರ್ನಾಟಕ ರಾಜ್ಯಕ್ಕೆ ಹೆಚ್ಚುವರಿಯಾಗಿ 500 ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿ ಹುದ್ದೆಗಳನ್ನು ಸೃಜಿಸುವ ಕುರಿತು. | SOCO post-500 |
| 8. | ಪಿ&ಸಿ(4)48/2024-25, ದಿನಾಂಕ: 11.03.2025. | ವಿಜಯಪುರ ಜಿಲ್ಲೆಯ ವಿಜಯಪುರ ಗ್ರಾಮೀಣ ವೃತ್ತ ಕಛೇರಿಯನ್ನು ವಿಭಜಿಸಿ ಎರಡು ವೃತ್ತ ಕಛೇರಿಯನ್ನು ಸೃಜಿಸುವ ಕುರಿತು. | ಸಿ.ಪಿ.ಐ -01,ಎ.ಎಸ್.ಐ-01, ಸಿ.ಹೆಚ್.ಸಿ-02 |
| 9. | ಪಿ&ಸಿ(4)49/2024-25, ದಿನಾಂಕ: 11.03.2025. | ವಿಜಯಪುರ ನಗರದಲ್ಲಿರುವ ಆದರ್ಶನಗರ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಕುರಿತು. | ಪಿಐ-01 |
| 10. | ಪಿ&ಸಿ(4)50/2024-25, ದಿನಾಂಕ: 11.03.2025. | ವಿಜಯಪುರ ಜಿಲ್ಲಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಲನಗರ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಕುರಿತು. | ಪಿಐ-01 |
| 11. | ಪಿ&ಸಿ(4)51/2024-25, ದಿನಾಂಕ: 11.03.2025. | ವಿಜಯಪುರ ಜಿಲ್ಲಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಪಿಎಂಸಿ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಕುರಿತು. | ಪಿಐ-01 |

| | | | |
|---|---|---|---|
| 12. | ಪಿ&ಸಿ(4)61/2024-25, ದಿನಾಂಕ: 11.03.2025. | ವಿಜಯಪುರ ಸಂಚಾರ ಪೊಲೀಸ್ ಠಾಣೆಯನ್ನು ವಿಭಜಿಸಿ ಉತ್ತರ ಸಂಚಾರ ಪೊಲೀಸ್ ಠಾಣೆಯನ್ನು ಸೃಜಿಸುವ ಹಾಗೂ ವಿಜಯಪುರ ಸಂಚಾರ ಪೊಲೀಸ್ ಠಾಣೆಯನ್ನು ಸಂಚಾರ ದಕ್ಷಿಣ ಪೊಲೀಸ್ ಠಾಣೆಯೆಂದು ಪದನಾಮಕರಿಸುವ ಕುರಿತು. | ಪಿಐ-01,ಪಿ.ಎಸ್‌ಐ-02,<br>ಎ.ಎಸ್‌ಐ-04,ಸಿಹೆಚ್.ಸಿ-04<br>ಸಿ.ಪಿ.ಸಿ-36 |
| 13. | ಪಿ&ಸಿ(5)30/2024-25, ದಿನಾಂಕ: 23.10.2024. | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಅಧೀನ ಘಟಕಗಳಿಗೆ 03 ಡಿಐಜಿಪಿ (ನಾನ್ ಐ.ಪಿ.ಎಸ್) ಹುದ್ದೆಗಳನ್ನು ಸೃಜಿಸುವ ಕುರಿತು. | ಡಿಐಜಿಪಿ-03,ಎಫ್.ಡಿ.ಎ- 03<br>ಎಸ್.ಡಿ.ಎ-03 |
| 14. | ಪಿ&ಸಿ(5)31/2024-25, ದಿನಾಂಕ: 15.01.2025. | ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ 02 ಭಾರತೀಯ ಮೀಸಲು ಪಡೆಗಳನ್ನು ಸೃಜಿಸುವ ಕುರಿತು. | ಕಮಾಂಡೆಂಟ್-01<br>ಡೆಪ್ಯೂಟಿ, ಕಮಾಂಡೆಂಟ್-03<br>ಅಸಿಸ್ಟೆಂಟ್ ಕಮಾಂಡೆಂಟ್-07<br>ಸ್ಪೆ.ಆರ್.ಪಿಐ-07<br>ಸ್ಪೆ.ಆರ್.ಎಸ್.ಐ-23<br>ಸ್ಪೆ..ಎಆರ್ಎಸ್‌ಐ-18<br>ಸ್ಪೆ.ಆರ್.ಹೆಚ್.ಸಿ- 160<br>ಸ್ಪೆ.ಆರ್.ಪಿ.ಸಿ- 675<br>ಅನುಯಾಯಿ- 69<br>**ಲಿಪಿಕ ಸಿಬ್ಬಂದಿ**<br>ಹೆಡ್ ಕ್ಲರ್ಕ -01<br>ಕ್ಲರ್ಕ -05<br>ಸ್ಪೈನೋ-01<br>**ವೈರ್‌ಲೆಸ್ ಸ್ಟಾಫ್-**<br>ಪಿಐ-01<br>ಎಸ್‌ಐ-02 ಹೆಚ್.ಸಿ-04,<br>ಪಿಸಿ-26<br>**ಮೆಡಿಕಲ್ ಸ್ಟಾಫ್**<br>ಎಮ್ .ಒ.- 01<br>ಫಾರ್ಮಸಿಸ್ಟ್-02<br>ನಸಿಂಗ್ ಅಸಿಸ್ಟೆಂಟ್-01 |
| 15. | ಪಿ&ಸಿ(5)08/2018-19, ದಿನಾಂಕ: 03.03.2025. | ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲದಲ್ಲಿ ಹೊಸದಾಗಿ ಸಂಚಾರ ಪೊಲೀಸ್ ಠಾಣೆ ಸೃಜಿಸುವ ಕುರಿತು. | ಪಿ.ಎಸ್‌ಐ- 02<br>ಎ.ಎಸ್‌ಐ-04<br>ಹೆಚ್.ಸಿ-12<br>ಪಿಸಿ-24 |
| 16. | ಪಿ&ಸಿ(5)41/2023-24, ದಿನಾಂಕ: 03.03.2025. | ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕು ಸೋಸಲೇ ಗ್ರಾಮದಲ್ಲಿ ಹೊಸದಾಗಿ ಪೊಲೀಸ್ ಠಾಣೆ ಸೃಜಿಸುವ ಕುರಿತು. | ಪಿ.ಎಸ್‌ಐ- 02<br>ಎ.ಎಸ್‌ಐ-04<br>ಸಿಹೆಚ್.ಸಿ-12<br>ಸಿಪಿಸಿ-24 |
| 17. | ಪಿ&ಸಿ(5)55/2024-25, ದಿನಾಂಕ: 03.03.2025. | ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದಲ್ಲಿ ಹೊಸದಾಗಿ ಸಂಚಾರ ಪೊಲೀಸ್ ಠಾಣೆ ಸೃಜಿಸುವ ಕುರಿತು. | ಪಿ.ಎಸ್‌ಐ- 02<br>ಎ.ಎಸ್‌ಐ-04<br>ಹೆಚ್.ಸಿ-12<br>ಪಿಸಿ-24 |

| | | | |
|---|---|---|---|
| 18. | ಪಿ&ಸಿ(5)01/2024-25, ದಿನಾಂಕ: 23.12.2024. | ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ 02 ಭಾರತೀಯ ಮೀಸಲು ಪಡೆಗಳನ್ನು ಸೃಜಿಸುವ ಕುರಿತು. | ಕಮಾಂಡೆಂಟ್-01,<br>ಡೆಪ್ಯೂಟಿ ಕಮಾಂಡೆಂಟ್-03, ಅಸಿಸ್ಟೆಂಟ್ ಕಮಾಂಡೆಂಟ್-07,<br>ಸ್ಪೆ.ಆರ್.ಪಿಐ-07,<br>ಸ್ಪೆ.ಆರ್.ಎಸ್.ಐ-23,<br>ಸ್ಪೆ..ಎಆರ್ಎಸ್ಐ-18<br>ಸ್ಪೆ.ಆರ್.ಹೆಚ್.ಸಿ- 160<br>ಸ್ಪೆ.ಆರ್.ಪಿ.ಸಿ- 675,<br>ಅನುಯಾಯಿ- 69,<br>**ಲಿಪಿಕ ಸಿಬ್ಬಂದಿ**<br>ಹೆಡ್ ಕ್ಲರ್ಕ್ -01,<br>ಕ್ಲರ್ಕ್ -05,<br>ಸ್ಟೆನೋ-01,<br>**ವೈರ್‌ಲೆಸ್ ಸ್ಟಾಫ್-**<br>ಪಿಐ-01,<br>ಎಸ್ಐ-02, ಹೆಚ್.ಸಿ-04, ಪಿಸಿ-26<br>**ಮೆಡಿಕಲ್ ಸ್ಟಾಫ್**<br>ಎಮ್ .ಒ.- 01,<br>ಫಾರ್ಮಸಿಸ್ಟ್-02,<br>ನರ್ಸಿಂಗ್ ಅಸಿಸ್ಟೆಂಟ್-01 |
| 19. | ಪಿ&ಸಿ(5)54/2024-25, ದಿನಾಂಕ: 17.03.2025. | ಮೈಸೂರು ಜಿಲ್ಲೆಯನ್ನು ಕೇಂದ್ರವಾಗಿರಿಸಿಕೊಂಡು ಮೈಸೂರು ಭಾಗಕ್ಕೆ ಒಂದು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯನ್ನು ಸೃಜಿಸುವ ಕುರಿತು. | ಕಮಾಂಡೆಂಟ್-01<br>ಡೆಪ್ಯೂಟಿ ಕಮಾಂಡೆಂಟ್-01<br>ಅಸಿಸ್ಟೆಂಟ್ ಕಮಾಂಡೆಂಟ್-04<br>ಪಿಐ ಕೆ.ಎಸ್ಐ.ಎಸ್ಎಫ್-12<br>ಪಿಎಸ್.ಐ ಕೆ.ಎಸ್ಐ.ಎಸ್ಎಫ್-36<br>ಅಸಿಸ್ಟೆಂಟ್ ಪಿ.ಎಸ್ಐ – ಕೆ.ಎಸ್.ಐ.ಎಸ್ಎಫ್-83<br>ಹೆಚ್.ಸಿ- ಕೆ.ಎಸ್ಐ.ಎಸ್ಎಫ್-250<br>ಪಿಸಿ ಕೆ.ಎಸ್ಐ.ಎಸ್ಎಫ್-750<br>ಜಮೇದಾರ್- ಕೆ.ಎಸ್ಐ.ಎಸ್ಎಫ್-08<br>ಫಾಲೋಯರ್ ಕೆ.ಎಸ್ಐ.ಎಸ್ಎಫ್-25<br>ಲಿಪಿಕ ಸಿಬ್ಬಂದಿ<br>ಎಎಓ-01<br>ಶಾಖಾಧೀಕ್ಷಕರು- 02<br>ಪ್ರ.ದ.ಸ -06<br>ದ್ವಿ.ದಸ- 08<br>ಶೀಘ್ರಲಿಪಿಗಾರರು- 02<br>ದಲಾಯತ್ -03 |

Government of Karnataka
(Police Department)

Office of the Director General & Inspector General of Police,
Karnataka State,
Nrupathunga Road,
Bengaluru-560 001

No.CRM-2/324/WP/2022

Office of the
Director General and
Inspector General of Police,
Nrupathunga Road, Bengaluru-01
Dated:20-11-2023

# Standard Operating Procedure (SOP) Towards Use of Body Worn Camera (BWC)

A Circular was issued from this office vide this office circular number CRM-2/324/WP/2022 Dt. 24/11/2022, on the usage of Body Worn Cameras (BWC) during the arrest as per the Order dated 10/06/2022 of the Hon'ble High Court of Karnataka in Writ Petition No. 115362/2019. Directions were issued to make body worn cameras available to all the police officers who proceed to arrest a person, so that the process of arrest is recorded in such body worn cameras.

Usage of Body worn cameras will improve the quality of evidence, reduce complaints against Police and shall also improve transparency in Police work. For effective usage of Body Worn Cameras by the Police during handling of Law and Order situation, Investigation of Crime, and Traffic Management, the following Standing operating procedure (SOP) are issued.

## Wearing/use of BWC;-

Body worn Camera shall preferably be worn on the left shoulder to ensure that faces of people or event can be captured properly.

Public/persons whose activities are going to be recorded shall be informed about the use of BWC prior to recording.

## Custody of BWC:-

Officer incharge of the Unit shall take all precautions to ensure proper safety and custody of the BWC. BWC shall be assigned to officers/policemen who have been properly trained for it's usage. Care should be taken to preserve the data in the device at the time of handing over to the next duty officer.

Officer incharge shall ensure that BWC are kept fully charged for the use. They shall also check the ready status of the device and should also keep additional charged battery for emergency situation.

## Training:-

Training is to be provided on the proper care, maintenance, operations and use of the BWC including evidence handling. Periodic training and assessment should be done to ensure the continued effective use of the equipment. Efforts shall be made to impart training to as many officers/policemen as possible.

## Storage of Data:-

Retention and Destruction of Digital Multimedia Evidence:

a. Recorded Data shall be retained up to a minimum of 30 days or as required for investigation or any other purpose.
b. Each set of recorded data shall be copied to a portable storage drive and shall have a unique tracking sheet.
c. All recorded data shall have a backup copy stored in a separate and secure storage hard drive for sufficient period.

## Maintenance:-

The BWC is an expensive equipment and it shall be the responsibility of the officer incharge of the unit to ensure that the BWC is operated and maintained according to the manufacturer's

instructions. If the BWC is not operating properly, the assigned officer shall log their complaint with the superiors and suppliers immediately.

All the Unit Officers are hereby directed to go through the above directions and communicate the same to all your subordinate police officers and comply. The receipt of this guidelines shall be acknowledged.

(Dr. Alok Mohan, IPS)
Director General and
Inspector General of Police
Karnataka State.

To:

1. The Commissioners of Police, Bengaluru City/Mysore City/Hubbali - Dharawada City/Mangalore City, Belagavi City & Kalaburagi City.
2. All IGP/DIGPs of Ranges and Addl CPs /Jt CPs of Bengaluru.
3. The Director, Karnataka Police Academy, Mysuru.
4. All Superintendents of Police, In charge of Districts, Including KGF and Railways.
5. DCPs of all COPs
6. All Dy.S.Ps/ACPs in District/COP through the SPs/COPs.
7. All Police Inspectors in District/COP through the SPs/COPs.
8. All SHOs through the SPs/COPs.

Copy to:

1. The Director General of Police, Internal Security Division, Bengaluru
2. The Director General of Police, CID, Special Units &Economic
3. Offences, Bengaluru.
4. The Directors General of Police, Training, Bengaluru.

DGP CONTROL ROOM, BENGALURU
O/o: the DG & IGP, N.T.Road, B'luru-1
Out Messages Received for Transmission
NR No.............. THI..1300.......
Date 20/11/23 Sign..

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: ಕಾನೂನು(1)/04/2017-18

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್‌ರವರ ಕಛೇರಿ,
ದಿನಾಂಕ: 24-05-2017.

# ಸುತ್ತೋಲೆ

ವಿಷಯ: ಸಿವಿಲ್ ವ್ಯಾಜ್ಯ ಪ್ರಕರಣಗಳಲ್ಲಿ ಪೊಲೀಸರು ಮಧ್ಯ ಪ್ರವೇಶ ಮಾಡದಿರುವ ಬಗ್ಗೆ.

ಉಲ್ಲೇಖ: 1) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಕ್ರಿಮಿನಲ್ ಅರ್ಜಿ ಸಂಖ್ಯೆ: 7793/2016

2) Circular No: Law-1/19/1997 dtd: 02-06-1997

3) Circular No: CRM/33/Misc-1/2009 dtd:18-02-2009

4) Circular No: GC-52/SHRC/2013 dtd: 22-05-2013

** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಧಾನ ಕಚೇರಿಯಿಂದ ಹೊರಡಿಸಲಾಗಿರುವ ಉಲ್ಲೇಖದಲ್ಲಿ ನಮೂದಿಸಿರುವ ಸುತ್ತೋಲೆಗಳೆಡೆಗೆ ಎಲ್ಲಾ ಘಟಕಾಧಿಕಾರಿಗಳ ಗಮನ ಸೆಳೆಯಲಾಗಿದೆ. ಈ ಸುತ್ತೋಲೆಗಳಲ್ಲಿ ಪೊಲೀಸ್ ಅಧಿಕಾರಿಗಳು ಸಿವಿಲ್ ಪ್ರಕರಣಗಳಲ್ಲಿ ಮಧ್ಯ ಪ್ರವೇಶ ಮಾಡಬಾರದೆಂದು ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ. ಒಂದು ವೇಳೆ ಇಂತಹ ಸಿವಿಲ್ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಮಧ್ಯ ಪ್ರವೇಶ ಮಾಡಿದಲ್ಲಿ ಅಂತಹವರ ವಿರುದ್ಧ ಕಠಿಣ ಶಿಸ್ತು ಕ್ರಮ ತೆಗೆದುಕೊಳ್ಳುವಂತೆಯೂ ಸಹ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚಿಸಲಾಗಿದೆ.

ಆದಾಗ್ಯೂ, ಸಿವಿಲ್ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರು ಮಧ್ಯ ಪ್ರವೇಶ ಮಾಡುತ್ತಿದ್ದಾರೆಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಕ್ರಿಮಿನಲ್ ಪಿಟಿಷನ್ ಸಂಖ್ಯೆ 7793/2016ರಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲದೇ ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳ ಮಧ್ಯ ಪ್ರವೇಶವನ್ನು ಗಂಭೀರವಾಗಿ ಪರಿಗಣಿಸಿದ್ದು, ಈ ಬಗ್ಗೆ ಇಲಾಖೆಯು ಸಿವಿಲ್ ಪ್ರಕರಣಗಳಲ್ಲಿ ಮಧ್ಯ ಪ್ರವೇಶಿಸುವ ಪೊಲೀಸ್ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದೆ.

ಆದ್ದರಿಂದ ಸಿವಿಲ್ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರು ಮಧ್ಯ ಪ್ರವೇಶಿಸುವ ಪ್ರಕರಣಗಳನ್ನು ಎಲ್ಲಾ ಘಟಕಾಧಿಕಾರಿಗಳು ಗಂಭೀರವಾಗಿ ಪರಿಗಣಿಸಿ, ಅಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಲು ಸೂಚಿಸಿದೆ. ಸಿವಿಲ್ ಪ್ರಕರಣಗಳಲ್ಲಿ ಮಧ್ಯ ಪ್ರವೇಶಿಸುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರ ವಿರುದ್ಧ ಕಠಿಣವಾದ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಿದೆ. ಈ ವಿಷಯದಲ್ಲಿ ಘಟಕಾಧಿಕಾರಿಗಳ ನಿರ್ಲಕ್ಷ್ಯ/ ಬೇಜವಾಬ್ದಾರಿಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

(ರೂಪಕ್ ಕುಮಾರ್ ದತ್ತಾ, ಐಪಿಎಸ್)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ

ಪೊಲೀಸ್ ಆಯುಕ್ತರು, ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಬೆಳಗಾವಿ ನಗರ (ಹೆಸರಿನಲ್ಲಿ)

ಎಲ್ಲಾ ವಲಯಗಳ ಪೊಲೀಸ್ ಮಹಾನಿರೀಕ್ಷಕರುಗಳಿಗೆ (ಹೆಸರಿನಲ್ಲಿ)

ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳು, [illegible] ಮತ್ತು [illegible] (ಹೆಸರಿನಲ್ಲಿ)